# ಮಂಗಳೂರು ವಿಶ್ವವಿದ್ಯಾನಿಲಯ

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ-574 199

ವಿಷಯ: ಸಹಾಯಕ ಕುಲಸಚಿವ ಹುದ್ದೆಯಿಂದ ಉಪಕುಲಸಚಿವ ಹುದ್ದೆಗೆ ಮುಂಭಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ಉಪಕುಲಸಚಿವ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪರಿನಿಯಮ
2. ದಿನಾಂಕ: 01.01.2017ರಲ್ಲಿರುವಂತೆ ಬೋಧಕೇತರ ಸಿಬ್ಬಂದಿಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿ.
3. ದಿನಾಂಕ 07.09.2019ರಂದು ನಡೆದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಂಡಳಿಯ ಶಿಫಾರಸ್ಸು
4. ದಿನಾಂಕ 23.09.2019ರಂದು ನಡೆದ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ ಸಿಬ್ಬಂದಿ ಸಾ.ಸ.5:15(2019) ರಲ್ಲಿ ಕೈಗೊಂಡ ನಿರ್ಣಯ
5. ಮಾನ್ಯ ಕುಲಪತಿಯವರ ಆದೇಶ ದಿನಾಂಕ 05.10.2019.

******

**ಪ್ರಸ್ತಾವನೆ:**

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಪ್ರಸ್ತುತ ಜಾರಿಯಲ್ಲಿರುವ ಉಪಕುಲಸಚಿವ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಶೇ.50 ರಷ್ಟು ಹುದ್ದೆಗಳನ್ನು ಅರ್ಹ ಸಹಾಯಕ ಕುಲಸಚಿವರುಗಳಿಗೆ ಆಯ್ಕೆ ಮೂಲಕ ಮುಂಬಡ್ತಿ ನೀಡಿ ಭರ್ತಿಗೊಳಿಸಬಹುದಾಗಿದೆ. ಉಪಕುಲಸಚಿವ ಖಾಲಿ ಹುದ್ದೆಗಳ ವರ್ಗೀಕರಣದ ಪ್ರಕಾರ ಎರಡು ಹುದ್ದೆಗಳು ಪದೋನ್ನತಿಗೆ ಲಭ್ಯವಿದ್ದು, ಅರ್ಹ ಸಹಾಯಕ ಕುಲಸಚಿವರುಗಳನ್ನು ಸಂದರ್ಶನ ನಡೆಸಿ ಆಯ್ಕೆ ಮಾಡುವ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 57ರ ಪ್ರಕಾರ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಂಡಳಿಯ ಮುಂದೆ ಮಂಡಿಸಲಾಗಿರುತ್ತದೆ. ದಿನಾಂಕ 07.09.2019ರಂದು ನಡೆದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಂಡಳಿಯ ಸಭೆಯಲ್ಲಿ ಅರ್ಹ ಕುಲಸಚಿವರ ಸಂದರ್ಶನ ನಡೆಸಿ, ಅಭ್ಯರ್ಥಿಗಳ ಅರ್ಹತೆ, ಸೇವಾ ದಾಖಲೆ, ಸಂದರ್ಶನದ ಕಾರ್ಯಕ್ಷಮತೆಯನ್ನು ಆಧರಿಸಿ ಶ್ರೀ ಪದ್ಮನಾಭ ಬಿ ಮತ್ತು ಶ್ರೀಮತಿ ಆಶಾಲತಾ ಇವರುಗಳಿಗೆ ಮುಂಭಡ್ತಿ ನೀಡಲು ಶಿಫಾರಸ್ಸು ಮಾಡಲಾಗಿರುತ್ತದೆ. ಅದರಂತೆ ಸದರಿಯವರಿಗೆ ದಿನಾಂಕ 27.09.2019ರ ಆದೇಶದಲ್ಲಿ ಉಪಕುಲಸಚಿವ ಹುದ್ದೆಗೆ ಮುಂಭಡ್ತಿನೀಡಲಾಗಿರುತ್ತದೆ. ಮುಂದುವರಿದು, ನೇಮಕಾತಿ ಮಂಡಳಿಯು ಸದರಿ ಸಭೆಯಲ್ಲಿ ಹುದ್ದೆಗಳು ಲಭ್ಯವಾದ ಸಂದರ್ಭದಲ್ಲಿ ಅರ್ಹ ಸಹಾಯಕ ಕುಲಸಚಿವರಾದ ಶ್ರೀ ಹುಕ್ರಪ್ಪ ನಾಯ್ಕ್ ಡಿ. ಇವರಿಗೂ ಮುಂಭಡ್ತಿ ನೀಡಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಶಿಫಾರಸ್ಸನ್ನು ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 57(5) ರ ಪ್ರಕಾರ ದಿನಾಂಕ 23.09.2019ರಂದು ನಡೆದ ಸಿಂಡಿಕೇಟು ಸಭೆಯು ಅನುಮೋದಿಸಿದೆ. ಶ್ರೀ ಪದ್ಮನಾಭ ಬಿ., ಉಪಕುಲಸಚಿವರು ಇವರು ದಿನಾಂಕ 30.09.2019ರಂದು ನಿವೃತ್ತರಾಗಿರುತ್ತಾರೆ. ಪ್ರಸ್ತುತ ಲಭ್ಯವಿರುವ 01 ಉಪಕುಲಸಚಿವ ಹುದ್ದೆಯನ್ನು ನೇಮಕಾತಿ ಮಂಡಳಿಯ ಶಿಫಾರಸ್ಸು ಹಾಗೂ ಸಿಂಡಿಕೇಟಿನ ನಿರ್ಣಯದಂತೆ ಶ್ರೀ ಹುಕ್ರಪ್ಪ ನಾಯ್ಕ್, ಸಹಾಯಕ ಕುಲಸಚಿವರು ಇವರಿಗೆ ಮುಂಭಡ್ತಿ ನೀಡಬಹುದಾಗಿದೆ.

ಆದುದರಿಂದ ಈ ಆದೇಶ.

**ಆದೇಶ ಸಂ.ಮವಿ/02/ಸಿಬ್ಬಂದಿ(2)/1996–97 ದಿನಾಂಕ: 05.10.2019**

ಮೇಲಿನ ಪ್ರಸ್ತಾವನೆಗೆ ಅನುಗುಣವಾಗಿ ಶ್ರೀ ಹುಕ್ರಪ್ಪ ನಾಯ್ಕ್ ಡಿ., ಸಹಾಯಕ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಉಪಕುಲಸಚಿವ ಹುದ್ದೆಗೆ ವೇತನ ಶ್ರೇಣಿ ರೂ. 67550-1650-72500-1900-83900-2200-97100-2500-104600/- ರಲ್ಲಿ ಮುಂಭಡ್ತಿ ನೀಡಲಾಗಿದೆ.

ಸದರಿಯವರು ಕುಲಸಚಿವರು (ಪರೀಕ್ಷಾಂಗ) ವಿಭಾಗದಲ್ಲಿ ಉಪಕುಲಸಚಿವ ಹುದ್ದೆಯ ಕರ್ತವ್ಯಕ್ಕೆ ಹಾಜರಾಗುವುದು ಹಾಗೂ ಉಪಕುಲಸಚಿವ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಮುಂಭಡ್ತಿಯು ಅನ್ವಯವಾಗುವುದು.

ಆದೇಶದ ಮೇರೆಗೆ,

ಕುಲಸಚಿವರು

ಗೆ:

ಸಂಬಂಧಪಟ್ಟವರಿಗೆ – ಕಚೇರಿ ಮುಖ್ಯಸ್ಥರ ಮೂಲಕ.

ಪ್ರತಿ:

1) ಕುಲಸಚಿವ (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2) ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3) ವಿಶೇಷಾಧಿಕಾರಿ (ಆಡಳಿತ), ಕುಲಸಚಿವರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4) ನಿರ್ದೇಶಕರು, ಗಣಕ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – ಮ.ವಿ.ವಿ ಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
5) ಸಹಾಯಕ ಕುಲಸಚಿವರು/ಎಲ್ಲಾ ಅಧೀಕ್ಷಕರು, ಕುಲಸಚಿವರ ಕಚೇರಿ, ಮಂವಿವಿ.
6) ಕುಲಪತಿಯವರ ಆಪ್ತ ಕಾರ್ಯದರ್ಶಿ/ವಿಶೇಷಾಧಿಕಾರಿ/ಕುಲಸಚಿವರ ಆಪ್ತ ಸಹಾಯಕರು, ಮಂವಿವಿ.
7) ಇ4, ಇ7, ಇ8, ಇ9, ಕಾರ್ಯನಿರ್ವಾಹಕರು, ಕುಲಸಚಿವರ ಕಛೇರಿ, ಮಂವಿವಿ.

# ಮಂಗಳೂರು ವಿಶ್ವವಿದ್ಯಾನಿಲಯ

ಸಂ. ಸಂ. ಮಂವಿ/ಕು.ಸ./ಸಿಬ್ಬಂದಿ(ಇ3)/8/2022

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574199
ದಿನಾಂಕ: 15.02.2022

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ(ಪರೀಕ್ಷಾಂಗ)ರ ಕಚೇರಿಯಲ್ಲಿ ವಿಶೇಷಾಧಿಕಾರಿಯವರ ನಿಯೋಜನೆ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಆದೇಶ ದಿನಾಂಕ: 11.02.2022

*******

ಶ್ರೀ ಮೋಹನ್ ಕೆ.ಎಸ್., ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸಿಂಡಿಕೇಟು ಸಭೆಯ ಘಟನೋತ್ತರ ಅನುಮೋದನೆಯ ನಿರೀಕ್ಷೆ ಮೇರೆಗೆ ಕುಲಸಚಿವರು(ಪರೀಕ್ಷಾಂಗ) ಕಚೇರಿಯಲ್ಲಿ ವಿಶೇಷಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿದೆ. ಸದರಿಯವರಿಗೆ ವಿಧಿಸಲಾದ ಸೇವಾ ಷರತ್ತುಗಳು ಈ ಕೆಳಗಿನಂತಿವೆ.

1. **ನಿಯೋಜನೆಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ**

   ನಿಯೋಜನೆಯ ಅವಧಿಯು ಸದರಿಯವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಆರಂಭಗೊಂಡು ವಿಶ್ವವಿದ್ಯಾನಿಲಯವು ಮುಂದಿನ ಆದೇಶ ಹೊರಡಿಸುವವರಗೆ ಮುಂದುವರಿಯುವುದು.

2. **ವೇತನ / ಪದೋನ್ನತಿ ಇತ್ಯಾದಿ**

   ನಿಯೋಜನೆಯ ಅವಧಿಯಲ್ಲಿ ಸದರಿಯವರು ಅವರದೇ ಮೂಲ ಹುದ್ದೆಯ ವೇತನ, ಭತ್ಯೆಗಳು, ಪದೋನ್ನತಿ ಇತ್ಯಾದಿಯೊಂದಿಗೆ ಮೂಲ ಹುದ್ದೆಯಲ್ಲಿ ಇದ್ದಾಗ ದೊರೆಯುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ. ವೇತನ ಹಾಗೂ ಭತ್ಯೆಗಳನ್ನು ವಿಭಾಗದ ಲೆಕ್ಕಶೀರ್ಷಿಕೆಯಿಂದ ಭರಿಸುವುದು.

3. **ರಜೆ ನಿಯಮಗಳು**

   ನಿಯೋಜನಾ ಅವಧಿಯಲ್ಲಿ ಬಿಡುವನ್ನು ಉಪಯೋಗಿಸಿಕೊಳ್ಳದಂತೆ ತಡೆದಿರುವ (vacation prevented staff) ನೌಕರರಿಗೆ ದೊರೆಯುವ ಗಳಿಕೆ ರಜಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

4. **ಇತರೆ**

   ಸದರಿಯವರಿಗೆ ಗಣಿತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿ ವಾರಕ್ಕೆ 04 ಗಂಟೆ ಉಪನ್ಯಾಸ ನೀಡಲು ಅನುಮತಿ ನೀಡಲಾಗಿದೆ.

ಕುಲಸಚಿವರು

ರಿಗೆ,

ಶ್ರೀ ಮೋಹನ್ ಕೆ.ಎಸ್.,
ಸಹಾಯಕ ಪ್ರಾಧ್ಯಾಪಕರು,
ಗಣಿತಶಾಸ್ತ್ರ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ - ವಿಭಾಗದ ಅಧ್ಯಕ್ಷರ ಮೂಲಕ

. . . 2

# ಮಂಗಳೂರು ವಿಶ್ವವಿದ್ಯಾನಿಲಯ

ಸಂ. ಮಂವಿ/ಕು.ಸ./ಸಿಬ್ಬಂದಿ(ಇ3)/5/2022

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574199
ದಿನಾಂಕ: 10.02.2022

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯವರ ನಿಯೋಜನೆ ಬಗ್ಗೆ.

ಉಲ್ಲೇಖ: ಕುಲಪತಿಯವರ ಅನುಮೋದನೆ ದಿನಾಂಕ 09.02.2022

******

ಡಾ. ಯಶಸ್ವಿನಿ ಬಿ., ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿದೆ. ಸದರಿಯವರಿಗೆ ವಿಧಿಸಲಾದ ಸೇವಾ ಷರತ್ತುಗಳು ಈ ಕೆಳಗಿನಂತಿದೆ.

1. **ನಿಯೋಜನೆಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ**

   ನಿಯೋಜನೆಯ ಅವಧಿಯು ಸದರಿಯವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಆರಂಭಗೊಂಡು ವಿಶ್ವವಿದ್ಯಾನಿಲಯವು ಮುಂದಿನ ಆದೇಶ ಹೊರಡಿಸುವವರೆಗೆ ಮುಂದುವರಿಯುವುದು.

2. **ವೇತನ / ಪದೋನ್ನತಿ ಇತ್ಯಾದಿ**

   ನಿಯೋಜನೆಯ ಅವಧಿಯಲ್ಲಿ ಸದರಿಯವರು ಅವರದೇ ಮೂಲ ಹುದ್ದೆಯ ವೇತನ ಪಡೆಯಲು ಅರ್ಹರಾಗಿರುತ್ತಾರೆ. ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು ನಿಯೋಜಿತ ಕೇಂದ್ರಸ್ಥಾನಕ್ಕೆ ಅನ್ವಯವಾಗುವಂತೆ ಪಡೆಯಲು ಅರ್ಹರಾಗಿರುತ್ತಾರೆ. ವೇತನ ಹಾಗೂ ಭತ್ಯೆಗಳನ್ನು ವಿಭಾಗದ ಲೆಕ್ಕ ಶೀರ್ಷಿಕೆಯಿಂದ ಭರಿಸುವುದು.

3. **ರಜೆ ನಿಯಮಗಳು**

   ನಿಯೋಜನಾ ಅವಧಿಯಲ್ಲಿ ಬಿಡುವನ್ನು ಉಪಯೋಗಿಸಿಕೊಳ್ಳದಂತೆ ತಡೆದಿರುವ (vacation prevented staff) ನೌಕರರಿಗೆ ದೊರೆಯುವ ಗಳಿಕೆ ರಜಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

4. ಸದರಿಯವರು ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ವಿಭಾಗದಲ್ಲಿ ವಾರಕ್ಕೆ 04 ಗಂಟೆ ಉಪನ್ಯಾಸ ನೀಡಲು ಹಾಗೂ 10 ವಿದ್ಯಾರ್ಥಿಗಳಿಗೆ ಮೀರದಂತೆ ಕ್ಷೇತ್ರ ಕಾರ್ಯ ಮೇಲ್ವಿಚಾರಣೆ ಮಾಡಲು ಅನುಮತಿ ನೀಡಲಾಗಿದೆ.

5. **ಇತರೆ**

   ವಿಶೇಷಾಧಿಕಾರಿಯವರ ಅಧಿಕಾರ ಮತ್ತು ಕರ್ತವ್ಯಗಳನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಲಾಗುವುದು.

ಕುಲಸಚಿವರು

ರಿಗೆ,

ಡಾ. ಯಶಸ್ವಿನಿ ಬಿ.,
ಸಹಾಯಕ ಪ್ರಾಧ್ಯಾಪಕರು,
ಸಮಾಜಕಾರ್ಯ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ – ವಿಭಾಗದ ಅಧ್ಯಕ್ಷರ ಮೂಲಕ

....2

# ಮಂಗಳೂರು ವಿಶ್ವವಿದ್ಯಾನಿಲಯ

ಸಂ. ಮಂವಿ/ಕು.ಸ./ಸಿಬ್ಬಂದಿ(ಇ3)/5/2022

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574199
ದಿನಾಂಕ: 02.02.2022

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯವರ ನಿಯೋಜನೆ ಬಗ್ಗೆ.

ಉಲ್ಲೇಖ: ದಿನಾಂಕ 28.01.2022ರಂದು ನಡೆದ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಸಂ. ಸಿಬ್ಬಂದಿ:ಸಾ.ಸ. 1:40(2022)ರಲ್ಲಿನ ನಿರ್ಣಯ

******

ಡಾ. ಶ್ರೀನಾಥ್ ಬಿ.ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನಕಾವೇರಿ, ಚಿಕ್ಕ ಅಳುವಾರ, ಕುಶಾಲನಗರ ಇವರನ್ನು ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿದೆ. ಸದರಿಯವರಿಗೆ ವಿಧಿಸಲಾದ ಸೇವಾ ಷರತ್ತುಗಳು ಈ ಕೆಳಗಿನಂತಿದೆ.

1. **ನಿಯೋಜನೆಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ**

   ನಿಯೋಜನೆಯ ಅವಧಿಯು ಸದರಿಯವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಆರಂಭಗೊಂಡು ವಿಶ್ವವಿದ್ಯಾನಿಲಯವು ಮುಂದಿನ ಆದೇಶ ಹೊರಡಿಸುವವರೆಗೆ ಮುಂದುವರಿಯುವುದು.

2. **ವೇತನ / ಪದೋನ್ನತಿ ಇತ್ಯಾದಿ**

   ನಿಯೋಜನೆಯ ಅವಧಿಯಲ್ಲಿ ಸದರಿಯವರು ಅವರದೇ ಮೂಲ ಹುದ್ದೆಯ ವೇತನ ಪಡೆಯಲು ಅರ್ಹರಾಗಿರುತ್ತಾರೆ. ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು ನಿಯೋಜಿತ ಕೇಂದ್ರಸ್ಥಾನಕ್ಕೆ ಅನ್ವಯವಾಗುವಂತೆ ಪಡೆಯಲು ಅರ್ಹರಾಗಿರುತ್ತಾರೆ. ವೇತನ ಹಾಗೂ ಭತ್ಯೆಗಳನ್ನು ವಿಭಾಗದ ಲೆಕ್ಕ ಶೀರ್ಷಿಕೆಯಿಂದ ಭರಿಸುವುದು.

3. **ರಜೆ ನಿಯಮಗಳು**

   ನಿಯೋಜನಾ ಅವಧಿಯಲ್ಲಿ ಬಿಡುವನ್ನು ಉಪಯೋಗಿಸಿಕೊಳ್ಳದಂತೆ ತಡೆದಿರುವ (vacation prevented staff) ನೌಕರರಿಗೆ ದೊರೆಯುವ ಗಳಿಕೆ ರಜಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

4. ಸದರಿಯವರು ಮಂಗಳೂರು ವಿಶ್ವವಿದ್ಯಾನಿಲಯದ ಜೀವವಿಜ್ಞಾನ ವಿಭಾಗದಲ್ಲಿ ಸೂಕ್ಷ್ಮಾಣು ಜೀವವಿಜ್ಞಾನ ಕೋರ್ಸ್ ಇಲ್ಲಿ ವಾರಕ್ಕೆ 04 ಗಂಟೆ ಉಪನ್ಯಾಸ ನೀಡಲು ಅನುಮತಿ ನೀಡಲಾಗಿದೆ.

5. **ಇತರೆ**

   ವಿಶೇಷಾಧಿಕಾರಿಯವರ ಅಧಿಕಾರ ಮತ್ತು ಕರ್ತವ್ಯಗಳನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಲಾಗುವುದು.

ಕುಲಸಚಿವರು

ರಿಗೆ,
ಡಾ. ಶ್ರೀನಾಥ್ ಬಿ.ಎಸ್.,
ಸಹಾಯಕ ಪ್ರಾಧ್ಯಾಪಕರು,
ಸ್ನಾತಕೋತ್ತರ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ,
ಜ್ಞಾನಕಾವೇರಿ, ಚಿಕ್ಕ ಅಳುವಾರ, ಕುಶಾಲನಗರ

- ನಿರ್ದೇಶಕರ ಮೂಲಕ

# ಮಂಗಳೂರು ವಿಶ್ವವಿದ್ಯಾನಿಲಯ

ಸಂ. ಮಂವಿ:ಸಿಆರ್ 35:ಸಿಬ್ಬಂದಿ(3):2020-21

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ – 574199
ದಿನಾಂಕ: 12.08.2021

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯವರ ನೇಮಕಾತಿ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಆದೇಶ ದಿನಾಂಕ: 11.08.2021

******

ಡಾ. ಶೇಖರ್ ನಾಯ್ಕ್, ಸಹಾಯಕ ಪ್ರಾಧ್ಯಾಪಕರು ಹಾಗೂ ಸಂಯೋಜಕರು, ಎಂ.ಬಿ.ಎ. (ಟಿ.ಟಿ.ಎಂ.), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ತಕ್ಷಣದಿಂದ ಅನ್ವಯವಾಗುವಂತೆ, ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯಾಗಿ ಈ ಕಚೇರಿಯ ಮುಂದಿನ ಆದೇಶದವರೆಗೆ ಸಿಂಡಿಕೇಟು ಸಭೆಯ ಘಟನೋತ್ತರ ಅನುಮೋದನೆಯ ನಿರೀಕ್ಷೆ ಮೇರೆಗೆ ನೇಮಕ ಮಾಡಲಾಗಿದೆ. ಸದರಿಯವರಿಗೆ ವಿಧಿಸಲಾದ ಸೇವಾ ಷರತ್ತುಗಳು ಈ ಕೆಳಗಿನಂತಿದೆ.

1. **ನಿಯೋಜನೆಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ**
   ನಿಯೋಜನೆಯ ಅವಧಿಯು ಸದರಿಯವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಆರಂಭಗೊಂಡು ವಿಶ್ವವಿದ್ಯಾನಿಲಯವು ಮುಂದಿನ ಆದೇಶ ಹೊರಡಿಸುವವರಗೆ ಮುಂದುವರಿಯುವುದು.
2. **ವೇತನ / ಪದೋನ್ನತಿ ಇತ್ಯಾದಿ**
   ನಿಯೋಜನೆಯ ಅವಧಿಯಲ್ಲಿ ಸದರಿಯವರು ಅವರದೇ ಮೂಲ ಹುದ್ದೆಯ ವೇತನ, ಭತ್ಯೆಗಳು, ಪದೋನ್ನತಿ ಇತ್ಯಾದಿಯೊಂದಿಗೆ ಮೂಲ ಹುದ್ದೆಯಲ್ಲಿ ಇದ್ದಾಗ ದೊರೆಯುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ. ವೇತನ ಹಾಗೂ ಭತ್ಯೆಗಳನ್ನು ವಿಭಾಗದ ಲೆಕ್ಕಶೀರ್ಷಿಕೆಯಿಂದ ಭರಿಸುವುದು.
3. **ರಜೆ ನಿಯಮಗಳು**
   ನಿಯೋಜನಾ ಅವಧಿಯಲ್ಲಿ ಬಿಡುವನ್ನು ಉಪಯೋಗಿಸಿಕೊಳ್ಳದಂತೆ ತಡೆದಿರುವ (vacation prevented staff) ನೌಕರರಿಗೆ ದೊರೆಯುವ ಗಳಿಕೆ ರಜಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.
4. ಸದರಿಯವರಿಗೆ ಎಂ.ಬಿ.ಎ.(ಟಿ.ಟಿ.ಎಂ.), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿ ವಾರಕ್ಕೆ 04 ಗಂಟೆ ಉಪನ್ಯಾಸ ನೀಡಲು ಅನುಮತಿ ನೀಡಲಾಗಿದೆ.
5. ವಿಶೇಷಾಧಿಕಾರಿಯವರ ಅಧಿಕಾರ ಮತ್ತು ಕರ್ತವ್ಯಗಳನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಲಾಗುವುದು.

ಆದೇಶದ ಮೇರೆಗೆ,

ಕುಲಸಚಿವರು

ರಿಗೆ,

ಡಾ. ಶೇಖರ್ ನಾಯ್ಕ್,
ಸಹಾಯಕ ಪ್ರಾಧ್ಯಾಪಕರು ಹಾಗೂ
ಸಂಯೋಜಕರು, ಎಂ.ಬಿ.ಎ.(ಟಿ.ಟಿ.ಎಂ.),
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ.

....2

# ಮಂಗಳೂರು ವಿಶ್ವವಿದ್ಯಾನಿಲಯ

ಮಂವಿ/ಸಿಬ್ಬಂದಿ(7)/ಸಿಆರ್ 27/2013-14

ಕುಲಸಚಿವರ ಕಚೇರಿ,
ಮಂಗಳಗಂಗೋತ್ರಿ-574199.
ದಿನಾಂಕ: 01.10.2018

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ(ಪರೀಕ್ಷಾಂಗ) ಕಚೇರಿಯಲ್ಲಿ ವಿಶೇಷಾಧಿಕಾರಿ ಇವರನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಟಿಪ್ಪಣಿ ದಿನಾಂಕ: 28.09.2018

*****

ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಸಂಬಂಧಿಸಿದ ಕೆಲಸದ ಒತ್ತಡ ಮತ್ತು ಹೆಚ್ಚುವರಿ ಕೆಲಸಗಳನ್ನು ನಿಭಾಯಿಸಿ ಕ್ಲಪ್ತ ಸಮಯದಲ್ಲಿ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಲು ಅನುಕೂಲವಾಗುವಂತೆ ಕುಲಸಚಿವ(ಪರೀಕ್ಷಾಂಗ) ಇವರಿಗೆ ಸಹಕರಿಸಲು ಶ್ರೀ ರಮೇಶ್ ಹೆಚ್.ಎನ್., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಪರೀಕ್ಷಾಂಗ ವಿಭಾಗದಲ್ಲಿ ವಿಶೇಷಾಧಿಕಾರಿಯಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಗಿನ ಷರತ್ತಿಗೊಳಪಟ್ಟು ಸಿಂಡಿಕೇಟಿನ ಘಟನೋತ್ತರ ಅನುಮೋದನೆಯನ್ನು ಕಾಯ್ದಿರಿಸಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿದೆ.

**ನಿಯೋಜನೆಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ**

1. ನಿಯೋಜನೆಯ ಅವಧಿಯು ಸದರಿಯವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಆರಂಭಗೊಂಡು ವಿಶ್ವವಿದ್ಯಾನಿಲಯವು ಮುಂದಿನ ಆದೇಶ ಹೊರಡಿಸುವವರೆಗೆ ಮುಂದುವರಿಯುವುದು.
2. **ವೇತನ /ಪದೋನ್ನತಿ ಇತ್ಯಾದಿ:**
   ವಿಶೇಷಾಧಿಕಾರಿಯವರು ನಿಯೋಜನೆಯ ಅವಧಿಯಲ್ಲಿ ಅವರದ್ದೆ ಮೂಲ ಹುದ್ದೆಯ ವೇತನ, ಭತ್ಯೆಗಳು, ಪದೋನ್ನತಿ ಇತ್ಯಾದಿಯೊಂದಿಗೆ ಮೂಲ ಹುದ್ದೆಯಲ್ಲಿ ಇದ್ದಾಗ ದೊರೆಯುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.
3. **ರಜೆ ನಿಯಮಗಳು:**
   ಸದರಿಯವರು ಈ ನಿಯೋಜನಾ ಅವಧಿಯಲ್ಲಿ ಬಿಡುವನ್ನು ಉಪಯೋಗಿಸಿಕೊಳ್ಳದಂತೆ ತಡೆದಿರುವ (Vacation Prevented) ನೌಕರರಿಗೆ ದೊರೆಯುವ ಗಳಿಕೆ ರಜಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.
4. ಸದರಿಯವರಿಗೆ ದೈಹಿಕ ಶಿಕ್ಷಣ ವಿಭಾಗದಲ್ಲಿ ವಾರಕ್ಕೆ 4 ಗಂಟೆ ಅವಧಿ ಉಪನ್ಯಾಸ ನೀಡಲು ಅನುಮತಿ ನೀಡಲಾಗಿದೆ.
5. ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ವಹಿಸಬಹುದಾದ ಇತರ ಕೆಲಸ ಕಾರ್ಯಗಳನ್ನು ಸದರಿಯವರು ನಿಭಾಯಿಸತಕ್ಕದ್ದು.

ಆದೇಶದ ಮೇರೆಗೆ,

ಕುಲಸಚಿವರು.

ರಿಗೆ,

ಶ್ರೀ ರಮೇಶ್ ಹೆಚ್.ಎನ್.
ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು,
ದೈಹಿಕ ಶಿಕ್ಷಣ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ. – ವಿಭಾಗದ ನಿರ್ದೇಶಕರ ಮೂಲಕ

**ಪ್ರತಿ:**

1. ಕುಲಸಚಿವ(ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – ನಿಯೋಜಿತ ಅಧಿಕಾರಿಗೆ ಸೂಕ್ತ ಕಾರ್ಯಭಾರವನ್ನು ನೀಡುವುದು.
2. ಗ್ರಂಥಪಾಲಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

. . . 2

# ಮಂಗಳೂರು ವಿಶ್ವವಿದ್ಯಾನಿಲಯ

ಸಂ.ಮವಿ/04/ಸಿಬ್ಬಂದಿ(3)/2018-19

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574199.
ದಿನಾಂಕ: 23.09.2020

## ಅಧಿಕೃತ ಜ್ಞಾಪನ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷಾಧಿಕಾರಿಯನ್ನು ನೇಮಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 23.09.2020

*******

ಡಾ. ಪ್ರಶಾಂತ್ ನಾಯ್ಕ್, ಪ್ರಾಧ್ಯಾಪಕರು, ಜೀವವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ತಕ್ಷಣದಿಂದ ಅನ್ವಯವಾಗುವಂತೆ ನಿಯೋಜನೆ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರ ಕಾರ್ಯಾಲಯದ ವಿಶೇಷಾಧಿಕಾರಿಯನ್ನಾಗಿ ಈ ಕಚೇರಿಯ ಮುಂದಿನ ಆದೇಶದವರೆಗೆ ಸಿಂಡಿಕೇಟು ಸಭೆಯ ಘಟನೋತ್ತರ ಅನುಮೋದನೆಯ ನಿರೀಕ್ಷೆ ಮೇರೆಗೆ ನೇಮಕ ಮಾಡಲಾಗಿದೆ. ಸದರಿಯವರಿಗೆ ವಿಧಿಸಲಾದ ಸೇವಾ ಷರತ್ತುಗಳು ಈ ಕೆಳಗಿನಂತಿವೆ.

1. **ನಿಯೋಜನೆಯ ಪ್ರಾರಂಭ ಮತ್ತು ಮುಕ್ತಾಯದ ಅವಧಿ**
   ನಿಯೋಜನೆಯ ಅವಧಿಯು ಸದರಿಯವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಆರಂಭಗೊಂಡು ವಿಶ್ವವಿದ್ಯಾನಿಲಯವು ಮುಂದಿನ ಆದೇಶ ಹೊರಡಿಸುವವರೆಗೆ ಮುಂದುವರಿಯುವುದು.

2. **ವೇತನ /ಪದೋನ್ನತಿ ಇತ್ಯಾದಿ:**
   ನಿಯೋಜನೆಯ ಅವಧಿಯಲ್ಲಿ ಸದರಿಯವರು ಅವರದೇ ಮೂಲ ಹುದ್ದೆಯ ವೇತನ, ಭತ್ಯೆಗಳು, ಪದೋನ್ನತಿ ಇತ್ಯಾದಿಯೊಂದಿಗೆ ಮೂಲ ಹುದ್ದೆಯಲ್ಲಿ ಇದ್ದಾಗ ದೊರೆಯುವ ಎಲ್ಲಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ. ವೇತನ ಹಾಗೂ ಭತ್ಯೆಗಳನ್ನು ವಿಭಾಗದ ಲೆಕ್ಕ ಶೀರ್ಷಿಕೆಯಿಂದ ಭರಿಸುವುದು.

3. **ರಜೆ ನಿಯಮಗಳು:**
   ಸದರಿಯವರು ಈ ನಿಯೋಜನಾ ಅವಧಿಯಲ್ಲಿ ಬಿಡುವನ್ನು ಉಪಯೋಗಿಸಿಕೊಳ್ಳದಂತೆ ತಡೆದಿರುವ (Vacation Prevented staff) ನೌಕರರಿಗೆ ದೊರೆಯುವ ಗಳಿಕೆ ರಜಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

4. ಸದರಿಯವರಿಗೆ ಜೀವವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿ ವಾರಕ್ಕೆ 04 ಗಂಟೆ ಅವಧಿ ಉಪನ್ಯಾಸ ನೀಡಲು ಅನುಮತಿ ನೀಡಲಾಗಿದೆ.

ಆದೇಶದ ಮೇರೆಗೆ,
ಕುಲಸಚಿವರು

ರಿಗೆ,
ಡಾ. ಪ್ರಶಾಂತ್ ನಾಯ್ಕ್
ಪ್ರಾಧ್ಯಾಪಕರು,
ಜೀವವಿಜ್ಞಾನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ